# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1190 |
| ಸದಸ್ಯರ ಹೆಸರು | ಶ್ರೀ ಎನ್.ನಾಗರಾಜು (ಎಂ.ಟಿ.ಬಿ) |
| ಉತ್ತರಿಸುವ ದಿನಾಂಕ | 20.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

********

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸರ್ವೆ ನಂ.87, 95, 118 ರಲ್ಲಿ ಸುಮಾರು 21 ಎಕರೆ 20 ಗುಂಟೆ ಜಮೀನಿದ್ದು, ಈ ಜಮೀನನ್ನು ಕೆಲವರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸರ್ವೆ ನಂ.87, 95, 118 ರಲ್ಲಿ ಸುಮಾರು 21 ಎಕರೆ 20 ಗುಂಟೆ ಜಮೀನಿರುತ್ತದೆ.<br><br>ಈ ಹಿಂದೆ ಇತರೆ ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತೆ ನಮೂದಾಗಿದ್ದು, ಇಲಾಖೆಯ ಗಮನಕ್ಕೆ ಬಂದ ನಂತರ ಉಪವಿಭಾಗಾಧಿಕಾರಿ, ಬೆಂಗಳೂರು ಉತ್ತರ ಉಪವಿಭಾಗ ಇವರ ನ್ಯಾಯಾಲಯದಲ್ಲಿ ದಾಖಲಿಸಲಾಗಿದ್ದ ಪ್ರಕರಣ ಸಂಖ್ಯೆ: R.A.(BE)/83/2019ಕ್ಕೆ ಸಂಬಂಧಿಸಿದಂತೆ ದಿನಾಂಕ:06.01.2023ರಲ್ಲಿ ನೀಡಿರುವ ಆದೇಶದಂತೆ ದೇವಸ್ಥಾನದ ಹೆಸರಿಗೆ ಖಾತೆ ದಾಖಲಿಸಲಾಗಿರುತ್ತದೆ. |
| ಆ) | ಮಾನ್ಯ ಉಪ ವಿಭಾಗಾಧಿಕಾರಿಗಳು, ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಈ ಸ್ವತ್ತಿಗೆ ಸಂಬಂಧಿಸಿದಂತೆ ದೇವಸ್ಥಾನದ ಪರವಾಗಿ ಆದೇಶವಾಗಿರುವುದು ನಿಜವೇ; ಹಾಗಿದ್ದಲ್ಲಿ, ಆದೇಶದ ದೃಢೀಕೃತ ಪ್ರತಿಗಳನ್ನು ನೀಡುವುದು; | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸರ್ವೆ ನಂ.87, 95, 118 ರಲ್ಲಿ ಸುಮಾರು 21ಎಕರೆ 20ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಉಪ-ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ-ವಿಭಾಗ, ಬೆಂಗಳೂರು ರವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: RA(BE)/83/2019 ದಾಖಲಾಗಿರುತ್ತದೆ.<br><br>ಸದರಿ ಪ್ರಕರಣದ ವಿಚಾರಣೆ ನಡೆದು ದಿನಾಂಕ: 06-01-2023ರಲ್ಲಿ ನೀಡಿರುವ ಆದೇಶದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದಲ್ಲಿ ಸರ್ವೆ ನಂ.87,95, 118 ರಲ್ಲಿ ಸುಮಾರು 21 ಎಕರೆ 20 ಗುಂಟೆಗೆ ಜಮೀನಿಗೆ ಸಂಬಂಧಿಸಿದಂತೆ ಕಾನೂನು ಪ್ರಕಾರ ಅಸ್ತಿತ್ವದಲ್ಲಿರುವ ಖಾತೆದಾರರ ಹೆಸರುಗಳನ್ನು ತೆಗೆದುಹಾಕಿ ಹೊಸಕೋಟೆ, ಕೋಮಟಿ ಪೇಟೆ ಶ್ರೀ ವೆಂಕಟರಮಣಸ್ವಾಮಿ ಹೆಸರು ನಮೂದಿಸಲು ಆದೇಶವಾಗಿರುತ್ತದೆ. (**ಆದೇಶದ ಪ್ರತಿ ಲಗತ್ತಿಸಿದೆ**)<br><br>ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ-ವಿಭಾಗ, ಬೆಂಗಳೂರು ರವರ ದಿನಾಂಕ: 06.01.2023 ರ ಆದೇಶದ ವಿರುದ್ಧ ಶ್ರೀ ಎನ್.ರಾಜಶೇಖರ್ ಮತ್ತಿತರರು ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ರವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: RP 53/2023 ನ್ನು |

| ಪ್ರಶ್ನೆ | | ಉತ್ತರ |
|---|---|---|
| | | ದಾಖಲು ಮಾಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 16.07.2024 ರ ಆದೇಶದಲ್ಲಿ ಪುನರ್ ಪರಿಶೀಲನಾ ಅರ್ಜಿಯಲ್ಲಿ ಅರ್ಹತೆ ಇಲ್ಲದ ಕಾರಣ ಪುನರ್ ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಲು ಆದೇಶಿಸಲಾಗಿರುತ್ತದೆ. (ಆದೇಶದ ಪ್ರತಿ ಲಗತ್ತಿಸಿದೆ). |
| ಇ) | ಸದರಿ ದೇವಸ್ಥಾನದ ಸ್ವತ್ತಿಗೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವುದು ನಿಜವೇ; ಹಾಗಿದ್ದಲ್ಲಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿರುವ ಈ ದಾವೆಯು ಪ್ರಸ್ತುತ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸರ್ವೆ ನಂ.87, 95, 118 ರಲ್ಲಿ ಸುಮಾರು 21ಎಕರೆ 20ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ರವರ ನ್ಯಾಯಾಲಯದ ಆದೇಶ ಸಂಖ್ಯೆ: RP 53/2023 ದಿನಾಂಕ:16-07-2024ರ ಆದೇಶದ ವಿರುದ್ಧ ಶ್ರೀ ಎನ್.ರಾಜಶೇಖರ್ ಮತ್ತಿತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ:21398/2024) (KLR RES) ಪ್ರಕರಣವು ದಾಖಲಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ:19-09-2024ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಮಧ್ಯಂತರ ತಡೆಯಾಜ್ಞೆಯನ್ನು ನೀಡಿರುತ್ತದೆ.<br><br>ಸದರಿ ದೇವಾಲಯದ ಸ್ವತ್ತಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸುವ ಕುರಿತು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರು ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಡಿಕೆವಾರು ಉತ್ತರಗಳನ್ನು/ಆಕ್ಷೇಪಣೆಗಳನ್ನು ಆಂಗ್ಲ ಭಾಷೆಯಲ್ಲಿ ತಯಾರಿಸಿ ದ್ವಿ-ಪ್ರತಿಯಲ್ಲಿ ಸರ್ಕಾರಿ ವಕೀಲರು ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.<br><br>ಸದರಿ ಪ್ರಕರಣದ ವಿಚಾರಣೆಯು ದಿನಾಂಕ:13-08-2025ರಂದು ವಿಚಾರಣೆಗೆ ಬಂದಿದ್ದು, ವಿಚಾರಣೆ ಮುಂದೂಡಲಾಗಿದ್ದು, ಮುಂದಿನ ವಿಚಾರಣೆ ದಿನಾಂಕ ನಿಗಧಿಯಾಗಿರುವುದಿಲ್ಲ. ಪ್ರಕರಣವನ್ನು ದೇವಾಲಯದ ಪರವಾಗಿ ಇತ್ಯರ್ಥ ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಕಂಇ 191 ಮುಸಪ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

(1)

(177)

# IN THE COURT OF THE ASSISTANT COMMISSIONER: BENGALURU NORTH SUB-DIVISION AT BENGALURU

R.A (BE) : 83/2019

Date On this 06 day of 01 / 2023

PRESENT Sri.Dr.M.G.Shivanna, KAS.,
Assistant Commissioner,
Bengaluru North Sub-Division,
Bengaluru.

APPELLANT/S:

1.Sri.K.H.Chandrashekar,
S/o late Hanumantharayappa,
Aged about 56 years,
President,
Shree Akkayamma and Shree Muneshwara Seva
Abhivruddi Trust (R), Byatarayanapura,
R/at No.100, 3rd Cross, 1st Main,
Chamundeshwari Layout,
Doddabommasandra, Ward No.10,
Bengaluru-560 097.

2.Sri Srinivas D,
S/o Doddabachappa,
Aged about 48 years,
R/at Kodigehalli,
Sahakaranagar post,
Bengaluru-560 092

3.Sri.Ramanjini,
S/o late Muniyappa,
Aged about 52 years,
R/at No.302, Maruthi Layout,
M V Extension, Hosakote,
Bengaluru-562 114.

Shivanna M.G

(176)

(2)

4 Sri Mohan H.K,
S/o late H J Krishnappa,
Aged about 75 years,
R/at K R Extension,
Pailwan Doddajunjappa Road,
Hosakote-562 114

5 Sri H.S Venkataramana Char,
S/o H Subbaraya Char,
Aged about 56 years,
R/at No.79-1,
Basaveshwara Devalayada Ardha Bagha,
Hosakote-562 114

6 Sri Ravindra H.G,
S/o late Gopal,
Aged about 57 years,
R/at K.R.Extension,
Hosakote-562 114.

7 Sri.H.S.Reddyvikhanasachrya,
S/o H.Srinivasachar,
Aged about 38 years,
R/at Market Road,
Near Venkataramanaswamy Temple,
Hosakote-562 114.

V/s

RESPONDENT/S,

1 The Tahsildar,
Bengaluru East Taluk,
K R Puram, Bengaluru

2 The Revenue Inspector,
Manduru village, K.R.Puram Hobli,
Bengaluru East Taluk.

Anand M.G

3.The Village Accountant,
Manduru village, K.R.Puram Hobli,
Bengaluru East Taluk.

4.Smt.Lakshmamma,
W/o Ashwathappa,
Aged about 60 years,

5.Sri.Manjunatha Gowda,
S/o Bachappa,
Aged about 63 years,

6.Sri.Rajashekara,
S/o late M.V.Narayanaswamy,
Aged about 67 years,

7.Sri.Munegowda,
S/o late M.V.Narayanaswamy
Aged about 63 years,

8.Sri.Chandrashekara Gowda,
S/o late M.V.Narayanaswamy,
Aged about 60 years,

9.Sri.Marathi S,
S/o Somashekara Gowda,
Aged about 38 years,

10.Smt.Sudamani,
D/o T.Muniyappa,
Aged about 52 years,

11.Smt.M.Suma,
D/o T.Muniyappa,
Aged about 48 years,

Chaithra.M.G

(74)

(4)

12.Sri.P.Somashekar Gowda.
S/o late Pillamunishamappa,
Aged about 74 years,

13.Sri.Anilkumar M S,
S/o late M.V.Sonnappa,
Aged about 48 years,

14 Smt.Aparathima M S,
D/o late M.V.Sonnappa,
Aged about 43 years,

15 Sri.Arvind M.S,
S/o late M.V.Sonnappa,
Aged about 40 years,

16 Sri.M.V.Jayaprakash,
S/o late Chikkaveeranna,
Aged about 77 years,

All are residing at
Manduru village and post,
Bidarahalli Hobli,
Bengaluru East Taluk,
Bengaluru-560 049

This is an appeal preferred by the appellant/s under section 136(2) of the Karnataka Land Revenue Act 1964 (hereinafter referred to as the 'Act') challenging the order of mutation in M.R.No 03/1975-76, 8/91-92, 9/91-92, 14/92-93, 1/92-93, IHR 8/92-93 and M.R.No 30/2010-11 dated 15-02-2011, M.R.No.T12/2011-12 dated 16-06-2012, M.R.No.H10/2013-14 dated 18-09-2013, M.R.No.H12/2017-18 dated 04-06-2018, M.R.No.3/75-76, M.R.No.14/92-93, M.R.No.3/75-76, M.R.No.8/91-92, M.R.No.2/94-95, M.R.No.33/2005-06 dated 21-06-2006 and M.R.No.H21/2017-18 dated 04-06-2018, in respect of the land in survey No 95, measuring 19 acres 19 guntas, in

Shailaja. M.G

survey No 87, measuring 1 acre 32 guntas and in survey No 118 measuring 0-09 guntas, situated at Manduru village, Bidarahalli Hobli, Bengaluru East Taluk (hereinafter referred to as the 'said property/ies').

1 The delay in filing the above appeal is condoned and the matter has taken up for adjudication on merits

2 The appellants submits that the Hosakote Komatipet Venkataramaswamy, registrar of Muzarai institutions endowed with sircar and Inam lands, registered document No 434/1490 dated 31-12-1932 description of Inam-Devadaya, Sheshachar is management of Inamdar and the lands in survey No.95, measuring 18 acres 35 guntas, in survey No.87, measuring 1 acre 31 guntas and in survey No.118, measuring 0-09 guntas, situated at Manduru village, Bidarahalli Hobli, Bengaluru East Taluk, now writing RTC in the year 1969-70 the land in survey No 95 measuring 19 acres 19 guntas, in survey No 87, measuring 1 acre 32 guntas and in survey No.118, measuring 0-09 guntas, totally measuring 21 acres 20 guntas, situated at Manduru village, Bidarahalli Hobli, Bengaluru East Taluk are originally belonged to Hosakote Komatipet Venkataramaswamy Temple which is comes under Muzrai and the same was represented by Govt by the Tahsildar and the said lands are Government lands and the same was illegally acquired by one M.V.Narayanaswamy son of Eranna through created, sham and fabricated illegal documents, the Special Deputy Commissioner order in case, Spl/DC(Inam) No A.141 dated 25-10-1975 and Spl/DC((Inam) No A1, M1-106/1975-76 dated 25-10-1975 the same was mentioned in LRF(3)MDB/1168/1974-75 order dated 03-05-1979, contending that as follows

Dated 03-05-1979 – "Case called petitioner and respondent present it is verified from the endorsement issued by the Spl/DC(Inam) No.S1, M1 106/75-76 dated 25-10-1975 that

Dinara M.G

these 3 items in survey No 95, 118 and 87 of Manduru have already been granted to the petitioner by the Spl.DC. Therefore, he is already registered occupant of those lands. The Land Tribunal holder the view that it is not necessary to register him as occupant again. The appellants submit that the land in survey No.118, measuring 0-09 guntas, mentioned alleged Spl/Dc(Inam) No.A, 141 dated 25-10-1975, mentioned RTC column No.10 in the year 1983-84 to 1986, Hence his petition is rejected unvoiced by as he is already registered as an occupant the Tribunal orders pronounced in open court".

i. The appellants was applied on 11-12-2018, the certified copy of the Spl/Dc(Inam)No.A1, M1:106/1975-76 dated 25-10-1975, order copy, before the 1st respondent in Right Information Act, the 1st respondent issued endorsement, same was verifying that in Index, in this type of case was not shown, as such not issued to appellants, the 1st respondent issued the endorsement on 21-12-2018.

ii. The appellants applied on 11-12-2018 for certified copy of M.R.No 3/1975-76, but the 1st respondent has issued an endorsement stating that M.R.No.3/1975-76 is not available and the appellants have applied for certified copy of entire file of LRF(3)MDB/1168/1974-75 but the 1st respondent has issued order sheet, personal notice, application in Form No.7.

3. Further submits that one M.V.Narayanaswamy having two alleged orders same date on 25-10-1975, 1) Spl.Dc (Inam) No.A1, M1:106/1975-76 dated 25-10-1975, survey No.95 and 87 and 2)Spl/Dc (Inam) No.A141 dated 25-10-1975, survey No.118, not registered above said case only mentioned in the writing RTC created documents is against the law as per KLR Act and on the basis of the above said alleged documents, the respondents 4 to 16 are on the bogus created and fabricated effected the revenue entries

and above said MRs. The respondents 4 to 16 are colluded with the respondents 1 to 3 created revenue entries and the respondents 1 to 3 without verifying the documents mutated the names of the respondents 4 to 16 is bad in law and hence the same are liable to be set-aside. Hence, the above appeal.

4. On the other side, the respondents have not appeared before this court and hence placed Ex-parte.

5. Heard the parties in the above appeal and posted the above appeal for orders.

6. I have perused the pleadings in the memorandum of appeal and the documents produced by the appellants.

7. On perusal of the Registrar of Muzarai Institutions endowed with Sircar and Inam lands in the Taluk of Hosakote, it clearly shows that the lands in question are endowed with the Hosakote Komatipet Venkataramanaswamy.

8. Further, on perusal of the original Tippany copies, it also depicts that the said lands in question are belongs to Hosakote Komatipet Venkataramanaswamy and its name had been reflected as Kardha of the said lands.

9. Thus it is very clear that the said lands are belongs to the said Hosakote Komatipet Venkataramanaswamy.

10. Further, on perusal of the order in LRF(B)MDB/1168/74-75, passed by the Land Tribunal, Hosakote, it shows that one M.V.Narayanaswamy had filed an application seeking occupancy rights in respect of the said land and the same has been rejected on the ground that the said lands have already been granted to the petitioner by the Spl.Dc (Inams) in No.A1.M1.106/75-76 dated 25-10-1975. Thus, it is very evident that the said M.V.Narayanaswamy had played fraud on the authorities

Anitha M.G

and by making misrepresentations and by producing created, concocted and fabricated documents before the concerned authorities, had obtained an illegal order and on the basis of the said alleged illegal orders, he got mutated his name in the revenue records. Since the said orders of the authorities was itself void, the revenue entries made in the name of the said M.V. Narayanaswamy were also illegal and liable to be set-aside. Consequently, all the subsequent mutations and revenue entries made in the names of the respondents 4 to 16 in respect of the lands in question are also illegal and non est in the eye law and hence the impugned orders are liable to be set-aside.

11 Further since the said lands are belongs to the said Hosakote Komatipet Venkataramanaswamy, it is just and necessary to restore the name of Hosakote Komatipet Venkataramanaswamy in the revenue records in respect of the lands in question. The above appeal is entitled to be allowed.

12 In view of the above mentioned facts and the observations made, I proceed to pass the following order;

ORDER

The above appeal of the appellant is hereby allowed.

The orders of mutation in M.R.No.03/1975-76, 8/91-92, 9/91-92, 14/92-93, 1/92-93, IHR 8/92-93 and M.R.No.30/2010-11 dated 15-02-2011, M.R.No.T12/2011-12 dated 16-06-2012, M.R.No.H10/2013-14 dated 18-09-2013, M.R.No.H12/2017-18 dated 04-06-2018, M.R.No.3/75-76, M.R.No.14/92-93, M.R.No.3/75-76, M.R.No.8/91-92, M.R.No.2/94-95, M.R.No.33/2005-06 dated 21-06-2006 and M.R.No.H21/2017-18 dated 04-06-2018, in respect of the land in survey No.95, measuring 19 acres 19 guntas, in survey No.87, measuring 1 acre 32 guntas and in survey No.118, measuring 0-09 guntas, situated

Anuraag M.G

at Manduru village, Bidarahalli Hobli, Bengaluru East Taluk, are hereby set-aside.

The Tahsildar, Bengaluru East Taluk, Bengaluru is hereby directed to remove the names of existing khaledars and mention the name of Hosakote Komatipet Venkataramanaswamy in column No.9 and 12(2) of the RTCs, in respect of the lands in survey No.95, measuring 19 acres 15 guntas, in survey No.87, measuring 1 acre 31 guntas and in survey No.118, measuring 0-09 guntas, situated at Manduru village, Bidarahalli Hobli, Bengaluru East Taluk, in accordance with law.

Dictated to the stenographer, the typescript edited by me, corrected and then pronounced in open court on 06 day of 01 2023.

Shivanna M.G 6/1/23

(Dr.M.G.Shivanna KAS.,)
Assistant Commissioner
Bengaluru North Sub-Division
Bengaluru

"ನಕಲು ನೀಡಿದೆ"

14/2/23

ನಕಲು ನೀಡಿದೆ

ಮಾಹಿತಿ ಹಕ್ಕು ಕಾಯ್ದೆಯಡಿ
"ನಕಲು ನೀಡಿದೆ"

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

**ಉಪಸ್ಥಿತರು : ಕೆ.ಎ. ದಯಾನಂದ, ಭಾ.ಆ.ಸೇ**
ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
ಬೆಂಗಳೂರು.

**ಪ್ರಕರಣದ ಸಂಖ್ಯೆ: RP 53/2023**

**ಅರ್ಜಿದಾರರು**

1. ಶ್ರೀ ರಾಜಶೇಖರ್. ಎನ್.
ಬಿನ್ ಲೇಟ್ ಎಂ.ವಿ. ನಾರಾಯಣಸ್ವಾಮಿ
ಸುಮಾರು 72 ವರ್ಷ
ನಂ.257, 5ನೇ ಮುಖ್ಯರಸ್ತೆ,
ವೈಯಾಲಿಕಾವಲ್, ಬೆಂಗಳೂರು-03.

2. ಶ್ರೀ ಎನ್. ಮುನೇಗೌಡ
ಬಿನ್ ಲೇಟ್ ಎಂ.ವಿ. ನಾರಾಯಣಸ್ವಾಮಿ
ಸುಮಾರು 65 ವರ್ಷ.
ನಂ.782, 12ನೇ ಅಡ್ಡರಸ್ತೆ,
ಮೂತ್ಯಾಲನಗರ, ಬೆಂಗಳೂರು-54.

3. ಶ್ರೀ ಎನ್. ಚಂದ್ರಶೇಖರಗೌಡ
ಬಿನ್ ಲೇಟ್ ಎಂ.ವಿ. ನಾರಾಯಣಸ್ವಾಮಿ
ಸುಮಾರು 68 ವರ್ಷ.
ಮಂಡೂರು ಗ್ರಾಮ, ಬಿದರಹಳ್ಳಿ ಹೋಬಳಿ,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು-560 049.

4. ಶ್ರೀ ಮಾರತಿ. ಎಸ್. @ ಮಾರುತಿ. ಎಸ್.
ಬಿನ್ ಸೋಮಶೇಖರ ಗೌಡ
ಸುಮಾರು 47 ವರ್ಷ.

5. ಶ್ರೀಮತಿ ಸುಧಾಮಣಿ
ಬಿನ್ ಲೇಟ್ ಮುನಿಯಪ್ಪ
ಕೋಂ. ಕೆ. ಕೃಷ್ಣಪ್ಪ
ಸುಮಾರು 57 ವರ್ಷ.
ನಂ. 331, 1ನೇ ಅಡ್ಡರಸ್ತೆ,
ಸರ್ಕಾರಿ ಕಾಲೇಜ್ ರಸ್ತೆ,
ಓಲ್ಡ್ ಎಕ್ಸಟೇಂಷನ್,
ಕೆ.ಆರ್. ಪುರಂ, ಬೆಂಗಳೂರು-36.

6. ಶ್ರೀಮತಿ ಎಂ. ಸುಮಾ
ಬಿನ್ ಲೇಟ್ ಮುನಿಯಪ್ಪ
ಕೋಂ. ಎ. ರಮೇಶ ಕುಮಾರ್
ಸುಮಾರು 53 ವರ್ಷ

**ಎದುರುದಾರರು**

1. ಉಪವಿಭಾಗಾಧಿಕಾರಿಗಳು,
ಬೆಂಗಳೂರು ಉತ್ತರ ಉಪವಿಭಾಗ,
ಉಪವಿಭಾಗಾಧಿಕಾರಿಗಳ ಕಛೇರಿ,
ಬೆಂಗಳೂರು ಉತ್ತರ ಉಪವಿಭಾಗ,
ಕೆ.ಜಿ. ರಸ್ತೆ, ಬೆಂಗಳೂರು-560 009.

2. ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು,
ಕೆ.ಆರ್. ಪುರಂ, ಬೆಂಗಳೂರು-560 066.

3. ರಾಜಸ್ವ ನಿರೀಕ್ಷಕರು,
ಮಂಡೂರು ಗ್ರಾಮ,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು.

4. ಗ್ರಾಮ ಲೆಕ್ಕಿಗರು
ಮಂಡೂರು ಗ್ರಾಮ,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು.

5. ಶ್ರೀ ಕೆ.ಹೆಚ್. ಚಂದ್ರಶೇಖರ್
ಬಿನ್ ಲೇಟ್ ಹನುಮಂತರಾಯಪ್ಪ
ಸುಮಾರು 56 ವರ್ಷ.
ಅಧ್ಯಕ್ಷರು,
ಶ್ರೀ ಅಕ್ಕಯ್ಯಮ್ಮ & ಶ್ರೀ ಮುನೇಶ್ವರ ಸೇವಾ
ಅಭಿವೃದ್ಧಿ ಟ್ರಸ್ಟ್ (ರಿ),
ಬ್ಯಾಟರಾಯನಪುರ,
ನಂ. 100, 3ನೇ ಅಡ್ಡರಸ್ತೆ, 1ನೇ ಮೈನ್,
ಚಾಮುಂಡೇಶ್ವರಿ ಲೇಔಟ್,
ದೊಡ್ಡಬೊಮ್ಮಸಂದ್ರ, ವಾರ್ಡ್ ನಂ.10,
ಬೆಂಗಳೂರು-560 097.

6. ಶ್ರೀ ಶ್ರೀನಿವಾಸ. ಡಿ.
ಬಿನ್ ದೊಡ್ಡಬಚ್ಚಪ್ಪ
ಸುಮಾರು 48 ವರ್ಷ
ಕೊಡಿಗೇಹಳ್ಳಿ,

ನಂ. 15, 4ನೇ ಅಡ್ಡರಸ್ತೆ,
ಬಿ. ನಾಗಸಂದ್ರ ,
ಬೆಂಗಳೂರು-37.

7. ಶ್ರೀ ಪಿ. ಸೋಮಶೇಖರ ಗೌಡ
ಬಿನ್ ಲೇಟ್ ಪಿಳ್ಳಮುನಿಶ್ಯಾಮಪ್ಪ
ಸುಮಾರು 78 ವರ್ಷ.

8. ಶ್ರೀ ಅನೀಲ್ ಕುಮಾರ್. ಎಂ.ಎಸ್.
ಬಿನ್ ಲೇಟ್ ಸೊನ್ನಪ್ಪ
ಸುಮಾರು 54 ವರ್ಷ.

9. ಶ್ರೀ ಅಪ್ರತಿಮಾ ಎಂ.ಎಸ್.
ಬಿನ್ ಲೇಟ್ ಸೊನ್ನಪ್ಪ
ಸುಮಾರು 48 ವರ್ಷ.

10. ಶ್ರೀ ಅರವಿಂದ ಎಂ.ಎಸ್.
ಬಿನ್ ಲೇಟ್ ಸೊನ್ನಪ್ಪ
ಸುಮಾರು 46 ವರ್ಷ.

11. ಶ್ರೀ ಎಂ.ವಿ. ಜಯಪ್ರಕಾಶ್
ಬಿನ್ ಲೇಟ್ ಚಿಕ್ಕವೀರಪ್ಪ
ಸುಮಾರು 83 ವರ್ಷ.

**ಎಲರೂ ವಾಸ:**

ಮಂಡೂರು ಗ್ರಾಮ & ಅಂಚೆ,
ಬಿದರಹಳ್ಳಿ ಹೋಬಳಿ,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು-560 049.

ಸಹಕಾರನಗರ ಅಂಚೆ,
ಬೆಂಗಳೂರು-560 092.

7. ಶ್ರೀ ರಾಮಂಜಿನಿ
ಬಿನ್ ಲೇಟ್ ಮುನಿಯಪ್ಪ
ಸುಮಾರು 52 ವರ್ಷ.
ನಂ.302, ಮಾರುತಿ ಲೇಔಟ್,
ಎಂ.ವಿ. ಏಕ್ಸಟೇಂಷನ್,
ಹೊಸಕೋಟೆ,
ಬೆಂಗಳೂರು-562 114.

8. ಶ್ರೀ ಮೋಹನ್ ಹೆಚ್.ಕೆ.
ಲೇಟ್ ಹೆಚ್.ಜೆ. ಕೃಷ್ಣಪ್ಪ
ಸುಮಾರು 75 ವರ್ಷ
ಕೆ.ಆರ್. ಏಕ್ಸಟೇಂಷನ್,
ಪೈಲ್ವಾನ್ ದೊಡ್ಡಜುಂಜಪ್ಪ ರಸ್ತೆ,
ಹೊಸಕೋಟೆ-562 114.

9. ಶ್ರೀ ಹೆಚ್.ಎಸ್. ವೆಂಕಟರಮಣಾಚಾರ್,
ಬಿನ್ ಹೆಚ್. ಸುಬ್ಬರಾಯಾಚಾರ
ಸುಮಾರು 56 ವರ್ಷ
ನಂ.79-1, ಬಸವೇಶ್ವರ ದೇವಾಲಯದ
ಅರ್ಧಭಾಗ, ಹೊಸಕೋಟೆ-562 114.

10. ಶ್ರೀ ರವೀಂದ್ರ ಹೆಚ್.ಜಿ.
ಬಿನ್ ಲೇಟ್ ಗೋಪಾಲ,
ಸುಮಾರು 57 ವರ್ಷ
ಕೆ.ಆರ್. ಏಕ್ಸಟೇಂಷನ್,
ಹೊಸಕೋಟೆ-562 114.

11. ಶ್ರೀ ಹೆಚ್.ಎಸ್. ರೆಡ್ಡಿವಿಕಾನಸಾಚಾರ್ಯ
ಬಿನ್ ಹೆಚ್. ಶ್ರೀನಿವಾಸಾಚಾರ್
ಸುಮಾರು 38 ವರ್ಷ
ಮಾರ್ಕೆಟ್ ರಸ್ತೆ,
ವೆಂಕಟರಮಣಸ್ವಾಮಿ ದೇವಸ್ಥಾನ ಹತ್ತಿರ,
ಹೊಸಕೋಟೆ-562 114.

12. ಶ್ರೀಮತಿ ಲಕ್ಷ್ಮಮ್ಮ
ಕೋಂ. ಅಶ್ವತ್ಥಪ್ಪ
ಸುಮಾರು 60 ವರ್ಷ
ಮಂಡೂರು ಗ್ರಾಮ & ಅಂಚೆ,
ಬಿದರಹಳ್ಳಿ ಹೋಬಳಿ,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು-560 049.

13. ಶ್ರೀ ಮಂಜುನಾಥ ಗೌಡ
ಬಿನ್ ಅಶ್ವತ್ಥಪ್ಪ
ಸುಮಾರು 63 ವರ್ಷ
ಮಂಡೂರು ಗ್ರಾಮ & ಅಂಚೆ,
ಬಿದರಹಳ್ಳಿ ಹೋಬಳಿ,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು-560 049.

14. ಶ್ರೀ ವೆಂಕಟರಮಣಸ್ವಾಮಿ
ಕೋಮಾಟ್ಟಿ ರಸ್ತೆ,
ಹೊಸಕೋಟೆ ಟೌನ್,
ಬೆಂಗಳೂರು ಗ್ರಾಮಾಂತರ.

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ 19-19 ಗುಂಟೆ ; ಸ.ನಂ.87 ರ 1-32 ಗುಂಟೆ ಹಾಗೂ ಸ.ನಂ.118 ರ 0-09 ಗುಂಟೆ ಬಗ್ಗೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರು ಮಾಡಿದ ಆದೇಶ RA(BE) 83/2019 ದಿ:6-1-2023ರ ವಿರುದ್ಧ ಕ.ಭೂ.ಅ 1964ರ ಕಲಂ 136(3) ರಡಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿರುವ ವಿಚಾರ.

ದಿ:23-01-2023 ರಂದು ಅರ್ಜಿದಾರರು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ 19-19 ಗುಂಟೆ ; ಸ.ನಂ.87 ರ 1-32 ಗುಂಟೆ ಹಾಗೂ ಸ.ನಂ.118 ರ 0-09 ಗುಂಟೆ ಬಗ್ಗೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರು ಮಾಡಿದ ಆದೇಶ RA(BE) 83/2019 ದಿ:6-1-2023 ರ ವಿರುದ್ಧ ಕ.ಭೂ.ಅ 1964ರ ಕಲಂ 136(3) ರಡಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿರುತ್ತಾರೆ.

ದಿ:30-01-2023 ರಂದು ಅರ್ಜಿದಾರರ ವಾದ ಆಲಿಸಿ, ಪ್ರಶ್ನಿತ ಆದೇಶಕ್ಕೆ ತಡೆಆಜ್ಞೆ ನೀಡಿ ವಿಚಾರಣೆಯನ್ನು ದಿ:28-02-2023ಕ್ಕೆ ನಿಗಧಿಪಡಿಸಿರುತ್ತದೆ. ನಂತರ ವಿವಿಧ ದಿನಾಂಕಗಳಂದು ವಿಚಾರಣೆ ನಡೆಸಿ ವಾದ ವಿವಾದಗಳನ್ನು ಕೇಳಿ ದಾಖಲೆಗಳನ್ನು ಸ್ವೀಕರಿಸಿ ದಿ:2-7-2024 ರಂದು ಆದೇಶಕ್ಕಾಗಿ ಕಾಯ್ದಿರಿಸಿರುತ್ತದೆ.

ಅರ್ಜಿದಾರರು ಪುನರ್ ಪರಿಶೀಲನಾ ಅರ್ಜಿಯಲ್ಲಿ ವಿವರಿಸುತ್ತಾ, 1 ರಿಂದ 3ನೇ ಅರ್ಜಿದಾರರ ತಂದೆ ದಿ|| ಎಂ.ವಿ. ನಾರಾಯಣಸ್ವಾಮಿ ಯವರು ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳಿಗೆ ಇನಾಂ ರದ್ದಿಯಾತಿ ಕಾಯ್ದೆ ಸೆಕ್ಷನ್ 9 ರಂತೆ ಬೆಂಗಳೂರು ಪೂರ್ವ ತಾಲ್ಲೂಕು, [ ಹಿಂದಿನ ಹೊಸಕೋಟೆ ತಾಲ್ಲೂಕು] ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ 19-15 ಗುಂಟೆ ; ಸ.ನಂ.87 ರ 1-31 ಗುಂಟೆ ಹಾಗೂ ಸ.ನಂ.118 ರ 0-09 ಗುಂಟೆ ಜಮೀನುಗಳು ವೆಂಕಟರಮಣಸ್ವಾಮಿ ದೇವಸ್ಥಾನದ

...4/

ಕೊಡುಗೆ ಜಮಿನುಗಳ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರೆಂದು ಹೇಳಿರುತ್ತಾರೆ. ಈ ಅರ್ಜಿಯ ಬಗ್ಗೆ ಪ್ರಕರಣದ ಸಂಖ್ಯೆ: A1-MI 106/75-76 ರಂತೆ ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳು ವಿಚಾರಣೆ ನಡೆಸಿ ದಿ:25-10-75 ರ ಆದೇಶದಂತೆ ನಮ್ಮ ತಂದೆ ಹೆಸರಿಗೆ ಮಂಜೂರು ಮಾಡಿ ಆದೇಶ ಮಾಡಿದ್ದರೆಂದು ಹೇಳಿರುತ್ತಾರೆ. ಈ ಸಂಬಂಧ ಸರ್ಕಾರಕ್ಕೆ 4732-00 ರೂ. ಪ್ರಿಮೀಯಂ ಪಾವತಿ ಮಾಡಿದ್ದು ದಿ:25-10-75 ರಂದು ಎಂಡಾರ್ಸ್‌ಮೆಂಟನ್ನು ನೀಡಲಾಗಿತ್ತೆಂದು ಹೇಳಿರುತ್ತಾರೆ. ಹಾಗೂ ಮಂಜೂರಾತಿಯಂತೆ MR 3/75-76 ರಂತೆ ಖಾತೆಯು ಆಗಿದ್ದಿತ್ತೆಂದು ಹೇಳಿರುತ್ತಾರೆ. ನಂತರ ದಿ|| ಎಂ.ವಿ. ನಾರಾಯಣಸ್ವಾಮಿ ಹಾಗೂ ಅವರ ಕುಟುಂಬದ ಸದಸ್ಯರು ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿದ್ದು. ನಂತರ ಎಂ.ವಿ. ನಾರಾಯಣಸ್ವಾಮಿ ಸ.ನಂ.95 ರಲ್ಲಿನ 0-09 ಗುಂಟೆಯನ್ನು ಆದೇಶ ಸಂಖ್ಯೆ: ALNSR 18/85-86 ದಿ:12-5-85 ರಂತೆ ಭೂಪರಿವರ್ತನೆ ಮಾಡಿಸಿದ್ದು. 4ನೇ ಅರ್ಜಿದಾರರು ಸಹಾ ಸ.ನಂ.95 ರ 0-12 ಗುಂಟೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆ ಮಾಡಿಸಿದ್ದು ಹಾಲಿ ಅಲ್ಲಿ ಪೆಟ್ರೋಲ್ ಬಂಕ್ ನಡೆಸುತ್ತಿರುವರೆಂದು ಹೇಳಿರುತ್ತಾರೆ. ಪರಿಸ್ಥಿತಿ ಈಗಿರುವಲ್ಲಿ 5 ರಿಂದ 11ನೇ ಎದುರುದಾರರು ಕೆಲವು ವ್ಯಕ್ತಿಗಳ ಪ್ರಚೋದನೆಯಿಂದ 1ನೇ ಎದುರುದಾರರಿಗೆ ಪ್ರಶ್ನಿತ ಸ್ವತ್ತುಗಳ ಬಗ್ಗೆ RABE 83/2019 ರಂತೆ ಮೇಲ್ಮನವಿ ಸಲ್ಲಿಸಿದ್ದು. ಅದರಲ್ಲಿ ಅದರಲ್ಲಿ ದಿ|| ಎಂ.ವಿ. ನಾರಾಯಣಸ್ವಾಮಿ ಮೋಸದಿಂದ ಪ್ರಶ್ನಿತ ಸ್ವತ್ತುಗಳ ಬಗ್ಗೆ ದಾಖಲೆ ಸೃಷ್ಟಿಸಿಕೊಂಡಿರುವರೆಂದು ಹೇಳಿರುತ್ತಾರೆ. ಈ ಅರ್ಜಿದಾರರು ಇನಾಂ ರದ್ದಿಯಾತಿ ದಾಖಲೆಗಳನ್ನು ಕೋರಿ 2ನೇ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು. ಅವರು ದಾಖಲೆಗಳು ಲಭ್ಯವಿಲ್ಲವೆಂದು ಹಿಂಬರಹ ನೀಡುರುವುದಾಗಿ ಹೇಳಿರುತ್ತಾರೆ. ಈ ಪ್ರಕರಣದ 5 ರಿಂದ 11ನೇ ಎದುರುದಾರರು ಅರ್ಜಿದಾರರು ಹಾಗೂ 12, 13ನೇ ಎದುರುದಾರರ ವಿರುದ್ಧ **Karnataka Land Grabbing Court** ನಲ್ಲಿ ಪ್ರಶ್ನಿತ ಸ್ವತ್ತುಗಳ ಬಗ್ಗೆ ದೂರು ದಾಖಲಿಸಿದ್ದು. ಈ ಬಗ್ಗೆ LGC (P) 35/2019 ರಂತೆ ಪ್ರಕರಣ ದಾಖಲಾಗಿ ವಿಚಾರಣೆ ನಡೆಯುತಿದ್ದುದಾಗಿ ಹೇಳಿರುತ್ತಾರೆ. ಈ ಬಗ್ಗೆ ಭೂ ಕಬಳಿಕೆ ಸಂಬಂಧ ಸ್ಥಾಪಿತವಾದ ನ್ಯಾಯಾಲಯದಿಂದ 2ನೇ ಎದುರುದಾರ ತಹಶೀಲ್ದಾರ್‌ಗೆ ಪ್ರಶ್ನಿತ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರಪಡಿಸಲು ನಿರ್ದೇಶಿಸಿದ್ದು. ಅವರು ದಾಖಲೆಗಳನ್ನು ಸಲ್ಲಿಸಿ ಯಾವುದೇ ಭೂಕಬಳಿಕೆ ಆಗಿಲ್ಲವೆಂದು ಸಲ್ಲಿಸಿದ ವರದಿ ಆಧರಿಸಿ ದಿ:11-4-2022 ರಂದು ಪ್ರಕರಣ ವಜಾಕರಿಸಿ ಆದೇಶ ಮಾಡಲಾಗಿರುವುದಾಗಿ ಹೇಳಿರುತ್ತಾರೆ. ಈ ಆದೇಶವಾದ ನಂತರ ಪ್ರಶ್ನಿತ ಜಮೀನುಗಳ ಖಾತೆಯನ್ನು ಹೊಸಕೋಟೆ ಕೊಮಿಟಿಪೇಟೆ ವೆಂಕಟರಮಣಸ್ವಾಮಿ ಹೆಸರಿಗೆ MRT 98/2022-23 ರಂತೆ ಹಾಗೂ MRT 99/22-23 ರಂತೆ ಖಾತೆ ಮಾಡಲಾಗಿವುದೆಂದು ಹೇಳಿರುತ್ತಾರೆ. ಈ ಬಗ್ಗೆ 1ನೇ ಎದುರುದಾರರು 45 ವರ್ಷಗಳ ವಿಳಂಭವಾಗಿ ಸಲ್ಲಿಸಿದ ದಾಖಲೆಗಳನ್ನು ಆಧರಿಸಿದ ಪ್ರಕರಣದಲ್ಲಿ ವಿಳಂಭ ಬಗ್ಗೆ ಸಕಾರಣಗಳನ್ನು ನೀಡದೆ ನಿಯಮಕ್ಕೆ ವಿರುದ್ಧವಾಗಿ ಪ್ರಶ್ನಿತ ಆದೇಶ ಮಾಡಿರುವರೆಂದು ಹೇಳುತ್ತಾ. ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಬೆಂಗಳೂರು ಪೂರ್ವ

ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ 19-19 ಗುಂಟೆ ; ಸ.ನಂ.87 ರ 1-32 ಗುಂಟೆ ಹಾಗೂ ಸ.ನಂ.118 ರ 0-09 ಗುಂಟೆ ಬಗ್ಗೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರು ಮಾಡಿದ ಆದೇಶ RA(BE) 83/2019 ದಿ:6-1-2023 & ತಹಶೀಲ್ದಾರ್ ಮಾಡಿದ ಆದೇಶ MRT 9/22-23 & MRT 99/22-23 ನ್ನು ರದ್ದುಪಡಿಸಲು ಕೋರಿರುತ್ತಾರೆ.

ದಿ:30-1-2023 ರಂದು 7 ರಿಂದ 11ನೇ ಎದುರುದಾರರು ವಕಾಲತ್ ಸಲ್ಲಿಸಿರುತ್ತಾರೆ. ಹಾಗೂ 9 ದಾಖಲೆಗಳನ್ನು ಸಲ್ಲಿಸಿರುತ್ತಾರೆ & 3 ದಾಖಲೆಗಳನ್ನು ಸಲ್ಲಿಸಿರುತ್ತಾರೆ ಹಾಗೂ ಲಿಖಿತ ಆಕ್ಷೇಪಣೆ ಸಲ್ಲಿಸಿದ್ದು. ಅದರಂತೆ ಪುನರ್ ಪರಿಶೀಲನಾ ಅರ್ಜಿಯಲ್ಲಿ ಅರ್ಹತೆ ಇಲ್ಲದ ಕಾರಣದಿಂದಲೂ, ಹೇಳಿರುವ ಎಲ್ಲಾ ಅಂಶಗಳು ಸೃಷ್ಟಿಸಿದ ಕತೆಯಾಗಿರುವುದರಿಂದ ವಜಾಕರಿಸಲು ಕೋರಿರುತ್ತಾರೆ. ಎದುರುದಾರರರು ಮುಂದೆ ವಿವರಿಸುತ್ತಾ. ಈ ಪ್ರಕರಣದ 7 ರಿಂದ 11ನೇ ಎದುರುದಾರರನ್ನು ಹೊಸಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದ ಟ್ರಸ್ಟಿಗಳನ್ನಾಗಿ ಮುಜಿರಾಯಿ ಇಲಾಖೆ ಆದೇಶ CR 13/16-17 ದಿ:4-11-2016 ರಂತೆ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಸಂಬಂಧ ಅಧಿಕೃತವಾಗಿ ನೇಮಕ ಮಾಡಲಾಗಿರುವುದೆಂದು ಹೇಳಿರುತ್ತಾರೆ. ಈ ಎದುರುದಾರರು 5, 6ನೇ ಎದುರುದಾರರರ ಜೊತೆ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ19-19 ಗುಂಟೆ ; ಸ.ನಂ.87 ರ1-32 ಗುಂಟೆ ; ಸ.ನಂ.118 ರ 0-09 ಗುಂಟೆ ಒಟ್ಟು 20-35 ಗುಂಟೆ ಜಮೀನಿನ ಖಾತೆಯನ್ನು ಆದೇಶದಂತೆ ಮಾಡಿದ MRT 98/22-23 ದಿ:18-1-2023 ರ ವಿರುದ್ಧ ಉಪವಿಭಾಗಾಧಿಕಾರಿಗಳಿಗೆ RABE 83/2019 ರಂತೆ ಮೇಲ್ಮನವಿ ಸಲ್ಲಿಸಿದ್ದುದಾಗಿ ಹೇಳಿರುತ್ತಾರೆ. ಮೊದಲಿಗೆ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ18-35 ಗುಂಟೆ ; ಸ.ನಂ.87 ರ1-31 ಗುಂಟೆ ; ಸ.ನಂ.118 ರ 0-09 ಗುಂಟೆ ಒಟ್ಟು 20-35 ಗುಂಟೆ ಜಮೀನು ಹೊಸಕೋಟೆ ಕೊಮಾಟಿಪೇಟೆ ವೆಂಕಟರಮಣಸ್ವಾಮಿ ಎಂಬ ಮುಜರಾಯಿ ಸಂಸ್ಥೆಗೆ ಸೇರಿದ ದೇವದಾಯ ಇನಾಂ ಜಮೀನುಗಳಾಗಿದ್ದು, ಇವುಗಳನ್ನು ಶೇಷಾಚಾರ ಎಂಬುವರು ಇನಾಂದಾರ್ ನವರು ನೋಡಿಕೊಳ್ಳುತ್ತಿದ್ದರೆಂದ ಅಂಶ ರಿಜಿಸ್ಟರ್ಡ್ ಪತ್ರ 434/1490 ದಿ:31-12-1932 ರಿಂದ ತಿಳಿದು ಬರುವುದೆಂದು ಹೇಳಿರುತ್ತಾರೆ. ಈ ಸ್ವತ್ತುಗಳು ಸರ್ಕಾರಿ ಸ್ವತ್ತುಗಳಾಗಿದ್ದು. ಅವುಗಳನ್ನು ಅಕ್ರಮವಾಗಿ ಎಂ.ವಿ. ನಾರಾಯಣಸ್ವಾಮಿ ಬಿನ್ ಈರಣ್ಣ ಎಂಬುವರು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದರೆಂದು. ಇವುಗಳನ್ನು ಮೋಸದಿಂದ ಸೃಷ್ಟಿಸಿದ ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳ ಆದೇಶ A1M1 106/75-76 ರಂತೆ ದಿ:25-10-75 ನ್ನು ಆಧರಿಸಿ ಭೂನ್ಯಾಯಮಂಡಳಿ ಆದೇಶ LRF (3) MDB/1168/74-75 ದಿ:3-5-79ರಂತೆ ಮಾಡಲಾಗಿರುವುದೆಂದು ಹೇಳಿರುತ್ತಾರೆ. ಆದರೆ ಈ ಬಗ್ಗೆ 5 ರಿಂದ 11ನೇ ಎದುರುದಾರರು ಪ್ರಶ್ನಿತ ಸ್ವತ್ತುಗಳ ಬಗ್ಗೆ ಆಗಿದೆಯೆನ್ನಲಾದ SPL/DC (Inam) No.A1M1 106/75-76

...6/

ದಿ:25-10-75 ರ ದೃಢೀಕೃತ ದಾಖಲೆ ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದು, ದಿ:31-12-2018 ರಂದು ದಾಖಲೆಗಳು ಲಭ್ಯವಿಲ್ಲವೆಂದು ಹಿಂಬರಹ ನೀಡಿರುವರೆಂದು ಹೇಳಿರುತ್ತಾರೆ. ಅದೇ ರೀತಿ 5 ರಿಂದ 11ನೇ ಎದುರುದಾರರು LRF (3) MDB 1168/74-75 ರ ಭೂನ್ಯಾಯಮಂಡಳಿ ಪೂರ್ಣ ಕಡತದ ದೃಢೀಕೃತ ದಾಖಲೆಗಳನ್ನು ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ದಿ:10-1-2019 ರಂದು ಆದೇಶದ ಪ್ರತಿ ನೀಡಿದ್ದು. ಸದರಿ ಆದೇಶವನ್ನು ದಿ:1-4-79 ರಂದು ಭಾನುವಾರ ಮಾಡಿರುವುದು ಕಂಡುಬಂದಿದ್ದು. ಇದರಿಂದ ಈ ದಾಖಲೆಗಳನ್ನು ಮೋಸದಿಂದ ಸೃಷ್ಟಿಸಿರುವುದು ದೃಢಪಡುವುದೆಂದು ಹೇಳಿರುತ್ತಾರೆ. ಈ ಎದುರುದಾರರು ಜಿಲ್ಲಾಧಿಕಾರಿಗಳ ಕಛೇರಿಗೆ SPL/DC (Inam) No. A1M1 106/75-76 ದಿ:25-10-75 ರ ದೃಢೀಕೃತ ಪ್ರತಿ ಕೊಡಲು ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದು. ದಿ:29-1-19 ಸದರಿ ಕಡತ ಲಭ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಈ ಅಂಶಗಳ ಪರಿಶೀಲನೆಯಿಂದ 2 ರಿಂದ 4ನೇ ಎದುರುದಾರರು, ಅರ್ಜಿದಾರರು 12, 13ನೇ ಎದುರುದಾರರು ಮೋಸದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡಿರುವರೆಂದು ಹೇಳಿರುತ್ತಾರೆ. ಪ್ರಶ್ನಿತ ಸ್ವತ್ತುಗಳು ಹೊಸಕೋಟೆ ಕೋಮಾಟಿಪೇಟೆ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಸೇರಿದ ಆಸ್ತಿಗಳಾಗಿದ್ದು. ಈ ಸ್ವತ್ತುಗಳ ಮೇಲೆ ಯಾರಿಗೂ ಯಾವುದೇ ರೀತಿಯ ಹಕ್ಕುಗಳು ಇಲ್ಲವೆಂದು ಈ ಸ್ವತ್ತುಗಳ ಬಗ್ಗೆ ಮೋಸದಿಂದ ಸೃಷ್ಟಿಸಿದ ದಾಖಲೆಗಳ ಆಧಾರದ ಮೇಲೆ ಪ್ರಶ್ನಿತ ಆದೇಶಗಳನ್ನು ಮಾಡಿರುವುದರಿಂದ ರದ್ದುಪಡಿಸಲು ಕೋರಿರುತ್ತಾರೆ.

ದಿ:3-2-2023 ರಂದು 7 ರಿಂದ 11ನೇ ಎದುರುದಾರರು WP 2421/2005 (LR) C/W WP 10141/2005 (LR) ಪ್ರತಿ ಸಲ್ಲಿಸಿರುತ್ತಾರೆ.

ದಿ:8-2-2023 ರ ಈ ನ್ಯಾಯಾಲಯದ ಮಧ್ಯಂತರ ಆದೇಶದಂತೆ ಈ ಹಿಂದೆ ನೀಡಿದ್ದ ತಡೆಆಜ್ಞೆ ತೆರವುಗೊಳಿಸಿ ವಿಚಾರಣೆ ಮುಂದುವರೆಸಿರುತ್ತದೆ.

ದಿ:13-4-2023 ರಿಂದ 7 ರಿಂದ 11ನೇ ಎದುರುದಾರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿತ ಸ್ವತ್ತಿನ ಬಗ್ಗೆ ನಡೆಯುತ್ತಿದ್ದ WP 4502/2023 ದಿ:9-3-2023 ರನ್ವಯ ತ್ವರಿತವಾಗಿ ಪ್ರಕರಣ ನಡೆಸಲು ಕೋರಿ ದಿ:5-6-2023 ರಿಂದ ದಿ;17-4-2023 ಕ್ಕೆ ಪ್ರಕರಣ ಹಿಂದೂಡಿಕೊಂಡು ವಿಚಾರಣೆ ಮುಂದುವರೆಸಲು ಕೋರಿರುತ್ತಾರೆ.

ದಿ:17-4-2023 ರಂದು 7 ರಿಂದ 11ನೇ ಎದುರುದಾರರು ಕ.ಭೂ.ಅ 1964ರ ಸೆಕ್ಷನ 67(2) ರಡಿ ಆಕ್ಷೇಪಣಾ ಅರ್ಜಿ ಸಲ್ಲಿಸುತ್ತಾ ಪ್ರಶ್ನಿತ ಸ್ವತ್ತುಗಳ ಬಗ್ಗೆ ಮೋಸದಿಂದ ಸೃಷ್ಟಿಸಿದ ದಾಖಲೆಗಳನ್ನು ಆಧರಿಸಿ ಅರ್ಜಿದಾರರು ಈ ಸ್ವತ್ತನ್ನು ಕಬಳಿಸಲು ಪ್ರಯತ್ನಿಸಿದ್ದು. ಸೆಕ್ಷನ್ 67(2) ರಂತೆ ಈ ಸ್ವತ್ತುಗಳನ್ನು ದೇವಸ್ಥಾನದ ಮಂಡಳಿ ವಶಕ್ಕೆ ನೀಡಲು 2ನೇ ಎದುರುದಾರರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

..7/

ದಿ:6-6-2023 ರಂದು 5ನೇ ಎದುರುದಾರರು ವಕಾಲತ್ ಸಲ್ಲಿಸಿರುತ್ತಾರೆ.

ದಿ:30-10-2023 ರಂದು 12ನೇ ಎದುರುದಾರರ ವಾರಸುದಾರರು ವಕಾಲತ್ ಸಲ್ಲಿಸಿರುತ್ತಾರೆ.

ದಿ:30-10-2023 ರಂದು ಅರ್ಜಿದಾರರು ಲಿಖಿತ ವಾದ ಸಲ್ಲಿಸಿದ್ದು. ಪುನರ್ ಪರಿಶೀಲನಾ ಅರ್ಜಿಯಲ್ಲಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

ದಿ:11-3-2024 ರಂದು ಅರ್ಜಿದಾರರು 14 ದಾಖಲೆಗಳನ್ನು ಮೆಮೊದೊಂದಿಗೆ ಸಲ್ಲಿಸಿರುತ್ತಾರೆ.

ದಿ:13-12-2023 ರಂದು ಅರ್ಜಿದಾರರು ಮೆಮೊದೊಂದಿಗೆ 5 ತೀರ್ಪುಗಳ ಪತ್ರಗಳನ್ನು ಸಲ್ಲಿಸಿರುತ್ತಾರೆ.

ದಿ:20-3-2024 ರಂದು 13ನೇ ಎದುರುದಾರರು ವಕಾಲತ್ ಸಲ್ಲಿಸಿರುತ್ತಾರೆ.

ದಿ:9-7-2024 ರಂದು 7 ರಿಂದ 11ನೇ ಎದುರುದಾರರು 4 ತೀರ್ಪುಗಳ ಪ್ರತಿಗಳನ್ನು ಸಲ್ಲಿಸಿರುತ್ತಾರೆ & ಲಿಖಿತ ವಾದ ಸಲ್ಲಿಸಿದ್ದು. ಆಕ್ಷೇಪಣಾ ಹೇಳಿಕೆಯಲ್ಲಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿದೆ.

ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರು ಪ್ರಕರಣದ ಸಂಖ್ಯೆ RA(BE)83/2019 ದಿ:6-1-2023ರಂದು ಈ ಕೆಳಕಂಡಂತೆ ಆದೇಶ ಮಾಡಿರುವುದು ಕಂಡುಬರುತ್ತದೆ.

"Further on perusal of the order in LRF(B) MDB/1168/74-75, passed by the Land Tribunal, Hosakote, it shows that one M.V. Narayanswamy had filed an application seeking occupancy rights in respect of the said land and the same has been rejected on the ground that the said lands have already been granted to the petitioner by the Spl.DC (Inams) in No.A1.M1.106/75-76 dated 25-10-1975. Thus, it is very evident that the said M.V. Narayanaswamy had played fraud on the authorities and by making misrepresentations and by producing created, concocted and fabricated documents before the concerned authorities, had obtained an illegal order an on the basis of the said alleged illegal orders, he got mutated his name in the revenue records. Since the said orders of the authorities was itself void, the revenue entries made in the name of the said M.V. Narayanaswamy were also illegal and liable

to be set-aside. Consequently, all the subsequent mutations and revenue entries made in the names of the respondents 4 to 16 in respect of the lands in question are also illegal and non est in the eye law and hence the impugned orders are liable to be set-aside.

Further since the said lands are belongs to the said Hosakote Komatipet Venkataramanaswamy, it is just and necessary to restore the name of Hosakote Komatipet Venkataramanaswamy in the revenue records in respect of the lands in question. The above appeal is entitled to be allowed.

In view of the above mentioned facts and the observations made, I proceed to pass the following order;

## ORDER

The above appeal of the appellant is hereby allowed.

The orders of mutation in M.R.No.03/1975-76, 8/91-92, 9/91-92, 14/92-93, 1/92-93, IHR 8/92-93 and M.R.No.30/2010-11 dated 15-02-2011, M.R.No.T12/2011-12 dted 16-06-2012, M.R.No.H10/2013-14 dated 18-09-2013, M.R.No.H12/2017-18 date 04-06-2018, M.R.No.3/75-76, M.R.No.14/92-93, M.R.No.3/75-76, M.R.No.8/91-92, M.R.No.2/94-95, M.R.No.33/2005-06 dated 21-06-2006 and M.R.No.H21/2017-18 dated 04-06-2018, in respect of the land in survey No.95, measuring 19 acres 19 guntas, in survey No.87, measuring 1 acre 32 guntas and in survey No.118, measuring 0-09 guntas, situated at Manduru Village, Bidarahalli Hobli, Bengaluru East Taluk, are hereby set-aside.

The Tahasildar, Bengaluru East Taluk, Bengaluru is hereby directed to remove the names of existing khatedars and mention the name of Hosakote Komatipet Venkataramanaswamy in column No.9 and 12(2) of the RTCs, in respect of the lands in survey No.95, measuring 19 acres 15 guntas, in survey No.87, measuring 1 acre 31 guntas and in survey No.118, measuring 0-09 guntas, situated at Manduru Village, Bidarahalli Hobli,

Bengaluru East Taluk inaccordance with law " ಎಂದು ಆದೇಶ ಮಾಡಿರುತ್ತಾರೆ.

ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರ ಕಛೇರಿ ಅಧಿಕೃತ ಜ್ಞಾಪನ ALN (EBB) SR 221/2011-12 ದಿ:14-5-2012 ರಂತೆ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರಲ್ಲಿ 0-15 ಗುಂಟೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಶ್ರೀ ಮಾರುತಿ ಬಿನ್ ಸೋಮಶೇಖರ್‌ಗೌಡ ಹೆಸರಿಗೆ ಭೂಪರಿವರ್ತನೆ ಮಾಡಿರುವುದು ಕಂಡುಬರುತ್ತದೆ.

ದಿ:4-1-2023 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ತಹಶೀಲ್ದಾರ್ ಬೆಂಗಳೂರು ಪೂರ್ವ ನೀಡಿರುವ ಪತ್ರ RK/RTI/CR 798/22-23 ರಂತೆ ಮಂಡೂರು ಗ್ರಾಮದ ಸ.ನಂ.87 95 ಮತ್ತು 118ರ ಜಮೀನಿಗೆ ಸಂಬಂಧಿಸಿದ ಇನಾಂ ಅಬಾಲಿಷನ್ ಆದೇಶ ಸಂಖ್ಯೆ: A1M1 101/70-71 ದಿ:14-5-70 ರಿಂದ A1M1 110/79-80 ದಿ:29-9-80ರ ಕಡತಗಳು ಲಭ್ಯವಿಲ್ಲವೆಂದು ಮಾಹಿತಿ ನೀಡಿರುವುದು ಕಂಡುಬರುತ್ತದೆ.

ದಿ:19-12-2022 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ತಹಶೀಲ್ದಾರ್ ಬೆಂಗಳೂರು ಪೂರ್ವ ನೀಡಿರುವ ಪತ್ರ RK/RTI/CR 808/22-23 ರಂತೆ ಮಂಡೂರು ಗ್ರಾಮದ ಸ.ನಂ.87, 95 ಮತ್ತು 118ರ ಜಮೀನಿಗೆ ಸಂಬಂಧಿಸಿದ ಇನಾಂ A1M1 106/75-76 ದಿ:25-10-75ರ ಕಡತವು ಲಭ್ಯವಿರುವುದಿಲ್ಲವೆಂದು ಮಾಹಿತಿ ನೀಡಿರುವುದು ಕಂಡುಬರುತ್ತದೆ.

ಮಾನ್ಯ ಉಚ್ಚನ್ಯಾಯಾಲಯದಲ್ಲಿ ಎನ್. ರಾಜಶೇಖರ್ ಬಿನ್ ಲೇಟ್ ಎಂ.ವಿ. ನಾರಾಯಣಸ್ವಾಮಿ ಇತರರು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಇತರರ ವಿರುದ್ಧ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ RP 53/2023 ರಲ್ಲಿ ದಿ:8-2-2023 ರಂದು ಮಾಡಿದ ಮಧ್ಯಂತರ ಆದೇಶದ ವಿರುದ್ಧ WP 4502/2023 (KLR-RES) ರಲ್ಲಿ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ದಿ:9-3-2023 ರಂದು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ.

" (i) The impugned order at Annexure-A dated 08-02-2023 vacating interim order of stay of order dated 06-01-2023 in R.A.(BE): 83/2019 is set aside

(ii) There shall be stay of order dated 03-01-2023 in R.A.(BE): 83/2019 passed by second respondent-Assistant Commissioner, Bengaluru North Sub-division at Bengaluru and the petitioners are directed not to alienate or create any third party interest in respect of the lands in question i.e., Sy.No.87 measuring 1 acre 31 guntas, Sy.No.95 measuring 19 acre 15 guntas, Sy.No.118, measuring 9 guntas of Mandur Village, Bidarahalli Hobli Hoskate Taluk during the pendency of R.P.No.53/2023 before the Deputy Commissioner,

(iii) The first respondent-Deputy Commissioner is directed to dispose of the Revision Petition in an expeditious manner not later than four moths from the date of receipt of a copy of this order" ಎಂದು ತೀರ್ಪು ನೀಡಿರುತ್ತದೆ.

ಅರ್ಜಿದಾರರು ಹೇಳಿಕೆ, ಎದುರುದಾರರ ಆಕ್ಷೇಪಣಾ ಹೇಳಿಕೆ ಪ್ರಶ್ನಿತ ಆದೇಶ ಲಭ್ಯದಾಖಲೆಗಳನ್ನು ಪರಿಶೀಲಿಸಿದೆ ಅರ್ಜಿದಾರರು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ 19-19 ಗುಂಟೆ ; ಸ.ನಂ.87 ರ 1-32 ಗುಂಟೆ ಹಾಗೂ ಸ.ನಂ.118 ರ 0-09 ಗುಂಟೆ ಬಗ್ಗೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ಮಾಡಿದ ಆದೇಶ RA(BE) 83/2019 ದಿ:6-1-2023 ರ ವಿರುದ್ಧ ಸಲ್ಲಿಸಿದ್ದು ಪ್ರಶ್ನಿತ ಸ್ವತ್ತುಗಳು ತಮ್ಮ ತಂದೆಯವರಿಗೆ ಮಂಜೂರಾಗಿದ್ದವೆಂದು ಅದರಂತೆ ಅವರ ಹೆಸರಿಗೆ ಖಾತೆಯು ಆಗಿದ್ದುದಾಗಿ ಹೇಳುತ್ತಾ. ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ 7 ರಿಂದ 11ನೇ ಎದುರುದಾರರು ಪ್ರಶ್ನಿತ ಸ್ವತ್ತುಗಳ ಬಗ್ಗೆ ಮೋಸದಿಂದ ದಾಖಲಗೆಳನ್ನು ಸೃಷ್ಟಿಸಿಕೊಂಡು ಅರ್ಜಿದಾರರ ತಂದೆಈ ದಾಖಲೆಗಳನ್ನು ಮಾಡಿಸಿಕೊಂಡಿರುತ್ತಾರೆಂದು ಹೇಳುತ್ತಾ. ಈ ಮಂಜೂರಾತಿ ಕಡತಗಳು ಲಭ್ಯವಿಲ್ಲವೆಂದು ತಹಶೀಲ್ದಾರ್ ಮಾಹಿತಿ ಹಕ್ಕು ಕಾಯ್ದೆಯಡಿ ನೀಡಿರುವ ಪತ್ರಗಳ ಪ್ರತಿಗಳನ್ನು ಹಾಜರಿ ಪಡಿಸಿರುತ್ತಾರೆ. ಈ ಪ್ರಕರಣದಲ್ಲಿ ದಾಖಲೆಗಳ ನೈಜತೆಯನ್ನು ಪರಿಶೀಲಿಸುವ ಅಥವಾ ಪ್ರಶ್ನಿಸಿ, ಪ್ರಕರಣದ ತೀರ್ಮಾನ ಮಾಡಬೇಕಾಗಿದ್ದು. ದಾಖಲೆಗಳ ನೈಜತೆ ಪರಿಶೀಲಿಸುವ ಅಥವಾ ಪ್ರಶ್ನಿಸುವ

8/18/25, 4:21 PM IMG-20250818-WA0020.jpg



...ಾರ ಸಿವಿಲ್ ನ್ಯಾಯಾಲಯಗಳಿಗೆ ಮಾತ್ರ ಇರುವುದರಿಂದ ಅರ್ಜಿದಾರರಿಗೆ ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಪಡೆಯಲು ಸೂಚಿಸುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬಂದು ಈ ಕೆಳಕಂಡಂತೆ ಆದೇಶ ಮಾಡಿದೆ.

## :-ಆದೇಶ:-

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ.95 ರ 19-19 ಗುಂಟೆ ; ಸ.ನಂ.87 ರ 1-32 ಗುಂಟೆ ಹಾಗೂ ಸ.ನಂ.118 ರ 0-09 ಗುಂಟೆ ಬಗ್ಗೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ಮಾಡಿದ ಆದೇಶ RA(BE) 83/2019 ದಿ:6-1-2023 ರ ವಿರುದ್ಧ ಸಲ್ಲಿಸಿದ ಪುನರ್ ಪರಿಶೀಲನಾ ಅರ್ಜಿಯಲ್ಲಿ ಅರ್ಹತೆ ಇಲ್ಲದ ಕಾರಣ ಪುನರ್ ಪರಿಶೀಲನಾ ಅರ್ಜಿ ವಜಾಕರಿಸಿ ಆದೇಶಿಸಿದೆ.

ಬೆರಳಚ್ಚುಗಾರರಿಗೆ ಹೇಳಿ ಬೆರಳಚ್ಚು ಮಾಡಿಸಿ, ಪರಿಶೀಲಿಸಿ, ದಿನಾಂಕ 16/7/24 ರಂದು ಆದೇಶವನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

(ಕೆ.ಎ. ದಯಾನಂದ)
ಜಿಲ್ಲಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು.

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು